## ಕಾರಲ್ಲಿ ಪ್ಯಾಸಿವ್ ಸ್ಮೋಕಿಂಗ್ ಕಿನ್ನರು!

ಕಾರು ಮಧ್ಯಮ ವರ್ಗದ ಅಗತ್ಯದಲ್ಲಿ ಸೇರಿ ಹೋಗಿದೆ. ಕಾರು ಎಂತದೇ ಇರಲಿ 'ಫೋರ್ ವೀಲರ್ ಒಂದಿರಲಿ' ಎಂಬುದು ಬಹುತೇಕರ ಮಾತು. ಇಂತಹ ಕಾರಿನ ಜಾಲಿ ರೈಡ್‌ನಲ್ಲಿ ಮಕ್ಕಳು 'ಪರೋಕ್ಷ ಧೂಮಪಾನ'ದಿಂದ ತೊಂದರೆಗೆ ಒಳಗಾಗುತ್ತಿದ್ದಾರೆ ಎಂಬ ಆತಂಕದ ಸಂಗತಿಯನ್ನು ಈಚಿನ ಅಧ್ಯಯನವೊಂದು ಹೊರ ಹಾಕಿದೆ.

ಕಾರೆಂದರೆ ಸಿಗರ್ ಲೈಟರ್ ಇರಲೇ ಬೇಕು. ಸಿಗರೇಟ್ ಕೂಡ ಶೋಕಿಗೋ ಫ್ಯಾಶನ್‌ಗೋ ಬಹುತೇಕರನ್ನು ಆಕರ್ಷಿಸುತ್ತದೆ. ಹೊರ ಸಂಚಾರ ಪ್ರಯಾಣದಲ್ಲಿ ಹಿರಿಯರು 'ಬತ್ತಿ' ಹಚ್ಚಿದರೆ ಹಿಂಬದಿಯಲ್ಲಿ ಕೂತ ಮಕ್ಕಳು ಪರೋಕ್ಷ ಧೂಮವನ್ನು (ಪ್ಯಾಸಿವ್ ಸ್ಮೋಕ್) ಸೇವಿಸಬೇಕಾಗುತ್ತದೆ. ಇದರಿಂದ ಹದಿಹರೆಯದ ಐದು ಮಕ್ಕಳಲ್ಲಿ ತಲಾ ಒಬ್ಬ ಅಪಾಯವನ್ನು ಎದುರಿಸುತ್ತಿದ್ದಾನೆ ಎಂದು ಈ ಅಧ್ಯಯನದ ವರದಿ ಹೇಳಿದೆ.

ತೊಂದರೆಗೆ ಒಳಗಾದ ಬಹುತೇಕ ಮಕ್ಕಳಲ್ಲಿ ಉಸಿರಾಟ– ಅಲರ್ಜಿಯಂತಹ ಸಮಸ್ಯೆ ಕಾಣಿಸಿಕೊಂಡಿದೆ. ಬಹುದಿನಗಳ ಹಿಂದೆಯೇ 'ಸಾರ್ವಜನಿಕ ಧೂಮಪಾನ' ನಿಷೇಧಕ್ಕೆ ಒಳಗಾಗಿದೆ. ಆದರೆ ಅದರ ಹಿಂದಿನ ಉದ್ದೇಶದ ಅರಿವಿಲ್ಲದೆ ಕಾರಿನಲ್ಲಿ ಧೂಮಪಾನ ಮಾಡುವುದು ಎಳೆಯರ ಆರೋಗ್ಯದ ಮೇಲೆ ದುಷ್ಪರಿಣಾಮವನ್ನು ಬೀರುತ್ತಿದೆ. ಮನೆಯಾಗಲಿ, ಕಾರಾಗಲಿ, ಬೀದಿಯೇ ಆಗಿರಲಿ ನೇರ ಧೂಮಪಾನಕ್ಕಿಂತ ಪರೋಕ್ಷ ಧೂಮಪಾನ ಹೆಚ್ಚು ಹಾನಿಕಾರಕ. ಈ ನಿಟ್ಟಿನಲ್ಲಿ ಜಾಗೃತಿ ವಹಿಸುವುದು ಕ್ಷೇಮ ಎಂದು ಸಂಶೋಧಕರು ತಮ್ಮ ವರದಿಯಲ್ಲಿ ಶಿಫಾರಸ್ಸು ಮಾಡಿದ್ದಾರೆ.

ಶೇಕಡಾ 40ರಷ್ಟು ಎಳೆಯ ಮಕ್ಕಳು ಪರೋಕ್ಷ ಧೂಮಪಾನಕ್ಕೆ ತುತ್ತಾಗುತ್ತಿದ್ದಾರೆ. ಕಳೆದ ಹತ್ತು ವರ್ಷಕ್ಕೆ ಹೋಲಿಸಿದರೆ ಅದರ ಪ್ರಮಾಣ ಶೇ.18ರಷ್ಟು ಹೆಚ್ಚಾಗಿದೆ. ಪೋಷಕರು ಮಕ್ಕಳ ಅಕ್ಕಪಕ್ಕದಲ್ಲಿ ಧೂಮಪಾನಕ್ಕೆ ಅವಕಾಶವನ್ನೇ ಕೊಡಬಾರದು ಎಂದು ಅವರು ಹೇಳಿದ್ದಾರೆ.



## ಎಳೆಯರ ಬೊಜ್ಜು ನಿರ್ಲಕ್ಷಿಸಬೇಡಿ!

ಮಕ್ಕಳಿಗೆ ಬಾಲ್ಯದಲ್ಲಿಯೇ ಬೊಜ್ಜು ವಕ್ಕರಿಸುವುದು ಸಾಮಾನ್ಯವಾಗಿದೆ. ಅದನ್ನು ತಡೆಯಲು ಪೋಷಕರೇ ಮಹತ್ವದ ಪಾತ್ರ ನಿರ್ವಹಿಸಬೇಕು ಎನ್ನುತ್ತದೆ ನ್ಯೂಯಾರ್ಕ್‌ನ ವಿಶ್ವವಿದ್ಯಾಲಯದ ಮಕ್ಕಳ ಅಧ್ಯಯನ ಕೇಂದ್ರ.

ಅಧ್ಯಯನ ಕೇಂದ್ರದ ಸಂಶೋಧಕರು ನಡೆಸಿದ ಸಂಶೋಧನೆಯಿಂದ ಬಾಲ್ಯದಲ್ಲಿದ್ದಾಗ ಊಟೋಪಚಾರವನ್ನು ಪೋಷಕರು ನೋಡಿಕೊಂಡರೆ ಬೊಜ್ಜಿನ ಪ್ರಮಾಣ ಕಡಿಮೆ ಎಂದು ತಿಳಿದು ಬಂದಿದೆ.

ಈ ಕೇಂದ್ರ ಆರ್ಥಿಕವಾಗಿ ಹಿಂದುಳಿದ 186 ಮಕ್ಕಳನ್ನು ಅಧ್ಯಯನಕ್ಕೆ ಒಳಪಡಿಸಿತ್ತು. ಅವರಲ್ಲಿ ಹೆಚ್ಚು ಮಕ್ಕಳಲ್ಲಿ ಬೊಜ್ಜಿನ ಸಮಸ್ಯೆ ಕಾಣಿಸಿಕೊಂಡಿತ್ತು. ಇದನ್ನು ಮುಂದಿಟ್ಟುಕೊಂಡ ಸಂಶೋಧಕರು ಅಧಿಕ ಬೊಜ್ಜಿನ ಸಮಸ್ಯೆ ಎದುರಿಸುವ ಹಾಗೂ ಪೋಷಕರ ಮೇಲ್ವಿಚಾರಣೆ ಇಲ್ಲದೆ ತಿಂದುಂಡು ಬೆಳೆಯುವ ಮಕ್ಕಳ ಒಂದು ತಂಡ; ಇದಕ್ಕೆ ಪರ್ಯಾಯವಾಗಿ ಪೋಷಕರ ಒತ್ತಾಸೆಯಿಂದ ತಿಂದುಣ್ಣುವ ಮಕ್ಕಳ ಒಂದು ತಂಡವನ್ನು ರಚಿಸಿ ನಿರಂತರವಾಗಿ 6 ತಿಂಗಳು ಅಧ್ಯಯನ ನಡೆಸಿದರು. ಬೊಜ್ಜಿನ ಸಮಸ್ಯೆ ಇದ್ದ ಮಕ್ಕಳ ನಡುವಳಿಕೆಯಲ್ಲಿ ವಿಚಿತ್ರ ಬದಲಾವಣೆ ಕಂಡುಬಂದಿವೆ ಎಂದು ತಮ್ಮ ವರದಿಯಲ್ಲಿ ತಿಳಿಸಿದರು.

ಅಂದರೆ, ಆ ಮಕ್ಕಳಲ್ಲಿ ಶಾಲಾ ವಾತಾವರಣ ಆಕರ್ಷಣೆಯನ್ನು ಕಳೆದುಕೊಂಡಿದೆ. ಕೆಲವರು ಶಾಲೆಯನ್ನೂ ಬಿಟ್ಟಿದ್ದಾರೆ. ಮುಂದುವರಿದು ಸಮಾಜ ವಿರೋಧಿ ಚಟುವಟಿಕೆಯಲ್ಲಿಯೂ ತೊಡಗಿದ್ದು ಕಂಡುಬಂದಿದೆ. ಆದರೆ, ಪೋಷಕರ ಉಸ್ತುವಾರಿಯಲ್ಲಿದ್ದ ಮಕ್ಕಳಲ್ಲಿ ಇಂತಹ ಗಂಭೀರ ಸಮಸ್ಯೆ ಕಂಡು ಬಂದಿಲ್ಲ ಎಂದು ಸಂಶೋಧಕರು ಸ್ಪಷ್ಟಪಡಿಸಿದ್ದಾರೆ. ಅದಕ್ಕೇ ಹೇಳುವುದು 'ಊಟ ಬಲ್ಲವರಿಗೆ ರೋಗವಿಲ್ಲ' ಎಂದು. ಎಳೆಯರಲ್ಲಿ ಬೊಜ್ಜು ಕಾಣಿಸಿಕೊಂಡರೆ ಅದನ್ನು ನಿರ್ಲಕ್ಷಿಸ ಬೇಡಿ. ಅದು ಹಲವು ರೋಗಗಳ ಉಗ್ರಾಣ ಆಗುವುದರಲ್ಲಿ ಅನುಮಾನವಿಲ್ಲ ಎಂದು ಸಂಶೋಧಕರು ಎಚ್ಚರಿಕೆಯನ್ನೂ ನೀಡಿದ್ದಾರೆ.

## ಸ್ತನ ಕ್ಯಾನ್ಸರ್ ಮದ್ದಿನ ಅಡ್ಡ ಪರಿಣಾಮ!

ಸ್ತನ ಕ್ಯಾನ್ಸರ್ ನಿಯಂತ್ರಣಕ್ಕೆ ನೀಡುವ ಮದ್ದೇ ಕೆಲವರಿಗೆ ಬೇರೊಂದು ಬಗೆಯ ತೊಂದರೆಯನ್ನು ಉಂಟು ಮಾಡುತ್ತಿದೆ. ಸ್ತನ ಕ್ಯಾನ್ಸರ್‌ನ ಔಷಧದಿಂದ ಮೂಳೆ ಸಂಬಂಧಿ ಕಾಯಿಲೆ ಆರಂಭವಾಗುತ್ತದೆ ಎಂದು ಅಧ್ಯಯನ ಹೇಳಿದೆ. 'ಸ್ತನ ಕ್ಯಾನ್ಸರ್'ಗೆ ನೀಡುವ ಔಷಧವೊಂದು ಅಡ್ಡ ಪರಿಣಾಮ ಬೀರುತ್ತಿದೆ! ಈ ಸಂಶಯವನ್ನು ಆಧಾರ ವಾಗಿ ಇಟ್ಟುಕೊಂಡು ಕೆನಡಾದ ಮೂಳೆ ತಜ್ಞರು ಅಧ್ಯಯನವನ್ನು ಆರಂಭಿಸಿದರು. ಸ್ತನ ಕ್ಯಾನ್ಸರ್ ರೋಗಕ್ಕೆ ತುತ್ತಾಗಿದ್ದ ವಂಶವಾಹಿಗೆ ಸೇರಿದ 4500 ಆರೋಗ್ಯವಂತ ಮಹಿಳೆಯರನ್ನು ಅಧ್ಯಯನಕ್ಕೆ ಒಳಪಡಿಸಿದ್ದರು.

ಅನಂತರ, ಸ್ತನ ಕ್ಯಾನ್ಸರ್‌ಗೆ ನೀಡುವ ಔಷಧದ ವಿಶ್ವಾಸಾರ್ಹತೆ ಅಲ್ಲಗಳೆಯುವಂತಿಲ್ಲ. ಆ ಔಷಧಿಯಿಂದ ಕ್ಯಾನ್ಸರ್ ತೊಂದರೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಸಾಧ್ಯ. ಇದನ್ನು ಖಚಿತ ಪಡಿಸಿಯೂ ಅದರ ಅಡ್ಡ ಪರಿಣಾಮವನ್ನು ಒಪ್ಪಿಕೊಂಡಿದ್ದಾರೆ. ಉನ್ನತಮಟ್ಟದ ಸ್ಕ್ಯಾನರ್ ಮೂಲಕ ಕ್ಯಾನ್ಸರ್‌ಗೆ ಚಿಕಿತ್ಸೆ ಪಡೆದ ಮಹಿಳೆಯರ ಮೂಳೆಗಳ ಸಾಮರ್ಥ್ಯವನ್ನು ಅಳೆದಾಗ ಸುಮಾರು 351 ಮಹಿಳೆಯರ ಮೂಳೆಯ ಸಾಂದ್ರತೆ ಪ್ರಮಾಣ ಕುಗ್ಗಿದ್ದು ಕಂಡುಬಂತು ಎಂದು ಸಂಶೋಧಕರ ತಂಡ ಹೇಳಿದೆ.

ನಿರಂತರವಾಗಿ ಎರಡು ವರ್ಷ ಈ ಔಷಧವನ್ನು ಬಳಸಿದಲ್ಲಿ ಮಂದಗತಿಯಲ್ಲಿ ಮೂಳೆಗೆ ಸಂಬಂಧಿಸಿದ ಭಿನ್ನ ಭಿನ್ನ ತೊಂದರೆಗಳು ಕಾಡುವ ಸಾಧ್ಯತೆ ಹೆಚ್ಚಿದೆ. ಋತುಬಂಧದಲ್ಲಿಯೂ ವ್ಯತ್ಯಾಸ ಕಾಣಲಿದೆ. ಆರಂಭಿಕ ಹಂತದಲ್ಲಿಯೇ ಸ್ತನ ಕ್ಯಾನ್ಸರ್ ತಡೆಯುವ ಅವಕಾಶವನ್ನು ಕಳೆದುಕೊಳ್ಳಬಾರದು ಎಂದು ಆ ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

– ಟಿಪ್ಸ್


